# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೦೮, ಜನವರಿ, ೨೦೨೬(ಪುಷ್ಯ, ೧೮, ಶಕವರ್ಷ, ೧೯೪೭)<br>BENGALURU, THURSDAY, 08, JANUARY, 2026(PUSHYA , 18, SHAKAVARSHA, 1947) | ನಂ. ೨೧<br>No. 21 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
## ಅಧಿಸೂಚನೆ
## ಸಂಖ್ಯೆ: ಸಂವ್ಯಶಾಇ 44 ಶಾಸನ 2025, ಬೆಂಗಳೂರು, ದಿನಾಂಕ: 08.01.2026

ಕರ್ನಾಟಕ ಬಾಡಿಗೆ (ತಿದ್ದುಪಡಿ) ವಿಧೇಯಕ, 2025 ಇದಕ್ಕೆ 2026 ರ ಜನವರಿ ತಿಂಗಳ 7ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2026 ರ ಕರ್ನಾಟಕ ಅಧಿನಿಯಮ ಸಂಖ್ಯೆ:07 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## 2026 ರ ಕರ್ನಾಟಕ ಅಧಿನಿಯಮ ಸಂಖ್ಯೆ: 07

(2026ರ ಜನವರಿ ತಿಂಗಳ 8ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಬಾಡಿಗೆ (ತಿದ್ದುಪಡಿ) ಅಧಿನಿಯಮ, 2025

(2025ರ ಜನವರಿ ತಿಂಗಳ 7ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಬಾಡಿಗೆ ಅಧಿನಿಯಮ, 1999ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬದುಕುವುದು ಮತ್ತು ವ್ಯವಹಾರ ನಡೆಸುವುದನ್ನು ಸರಾಗಗೊಳಿಸಲು ನಂಬಿಕೆ-ಆಧಾರಿತ ಆಡಳಿತವನ್ನು ಮತ್ತಷ್ಟು ವೃದ್ಧಿಸುವುದಕ್ಕಾಗಿ ಅಪರಾಧಗಳನ್ನು ನಿರಪರಾಧೀಕರಿಸಲು ಮತ್ತು ತರ್ಕಬದ್ಧಗೊಳಿಸಲು, ಕರ್ನಾಟಕ ಬಾಡಿಗೆ ಅಧಿನಿಯಮ, 1999 (2001ರ ಕರ್ನಾಟಕ ಅಧಿನಿಯಮ 34)ನ್ನು, ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಬಾಡಿಗೆ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 24ರ ತಿದ್ದುಪಡಿ.-** ಕರ್ನಾಟಕ ಬಾಡಿಗೆ ಅಧಿನಿಯಮ, 1999 (2001ರ ಕರ್ನಾಟಕ ಅಧಿನಿಯಮ 34)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 24ನೇ ಪ್ರಕರಣದ, (1)ನೇ ಉಪಪ್ರಕರಣದ ತರುವಾಯ, ಈ ಮುಂದಿನ ಉಪಪ್ರಕರಣವನ್ನು ಸೇರಿಸತಕ್ಕದ್ದು ಎಂದರೆ:-

"(1-ಎ) 54ನೇ ಪ್ರಕರಣದಡಿ ಉಪಬಂಧಿಸಲಾದಂತೆ, ನಿಯಂತ್ರಣಾಧಿಕಾರಿಯು **ದಂಡಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ನ್ಯಾಯ ನಿರ್ಣಯ ಅಧಿಕಾರಿಯ ಅಧಿಕಾರಗಳನ್ನು ಹೊಂದಿರ**ತಕ್ಕದ್ದು."

**3. ಪ್ರಕರಣ 53ನ್ನು ಬಿಟ್ಟುಬಿಡುವುದು.-** ಮೂಲ ಅಧಿನಿಯಮದ 53ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**4. ಪ್ರಕರಣ 54ರ ತಿದ್ದುಪಡಿ.-** ಮೂಲ ಅಧಿನಿಯಮದ 54ನೇ ಪ್ರಕರಣದಲ್ಲಿ,-

(i) ಪ್ರಸ್ತುತವಿರುವ ಉಪಬಂಧಕ್ಕೆ (1)ನೇ ಉಪಪ್ರಕರಣವೆಂಬ ಸಂಖ್ಯೆಯನ್ನು ನೀಡತಕ್ಕದ್ದು;

(ii) ಹಾಗೇ ಸಂಖ್ಯೆ ನೀಡಲಾದ, 1ನೇ ಉಪಪ್ರಕರಣದ ತರುವಾಯ ,-

(ಎ) ಖಂಡ (i)ರಲ್ಲಿ, "ಅವನು ದೋಷಸಿದ್ಧಿಯ ನಂತರ ಎರಡು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಒಪ್ಪಂದದ ಪ್ರತಿಯನ್ನು ಸಲ್ಲಿಸುವವರೆಗೆ ಅಥವಾ ಸಂದರ್ಭಾನುಸಾರ ವಿವರಗಳನ್ನು ಒದಗಿಸುವವರೆಗೆ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಐದು ನೂರು ರೂ.ಗಳ ಜುಲ್ಮಾನೆಗೆ ಬದ್ಧನಾಗಿರತಕ್ಕದ್ದು." ಎಂಬ ಪದಗಳ ಬದಲಾಗಿ "ಅವನು ಎರಡು ಸಾವಿರ ರೂಪಾಯಿಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ಒಪ್ಪಂದದ ಪ್ರತಿಯನ್ನು ಸಲ್ಲಿಸುವವರೆಗೆ ಅಥವಾ ಸಂದರ್ಭಾನುಸಾರ ವಿವರಗಳನ್ನು ಒದಗಿಸುವವರೆಗೆ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಐದು ಸಾವಿರ ರೂ.ಗಳ ಹೆಚ್ಚುವರಿ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು."

(ಬಿ) ಖಂಡ (ii)ರಲ್ಲಿ, ಅವನು ದೋಷಸಿದ್ಧಿಯ ನಂತರ ಕ್ಲೇಮು ಮಾಡಿದ ಅಥವಾ ಸ್ವೀಕರಿಸಿದ ಕಾನೂನು ಬಾಹಿರ ವೆಚ್ಚಗಳಿಂದ ಎರಡು ಸಾವಿರದ ಐದು ನೂರು ರೂ.ಗಳನ್ನು ಮೀರಿದ ಮೊತ್ತದವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯ ವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯತನಾಗತಕ್ಕದ್ದು" ಎಂಬ ಪದಗಳಿಗೆ ಬದಲಾಗಿ " ಅವನು ಕ್ಲೇಮು ಮಾಡಿದ ಅಥವಾ ಸ್ವೀಕರಿಸಿದ ಕಾನೂನು ಬಾಹಿರ ವೆಚ್ಚಗಳಿಂದ ಇಪ್ಪತ್ತು ಸಾವಿರ ರೂ.ಗಳನ್ನು ಮೀರಿದ ಮೊತ್ತದವರೆಗೆ ವಿಸ್ತರಿಸಬಹುದಾದಂಥ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು." ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) ಖಂಡ (iii)ರಲ್ಲಿ,-

(ಎ) ಉಪಖಂಡ (ಎ)ರಲ್ಲಿ, "ದೋಷ ಸಿದ್ಧಿಯ ನಂತರ ಎರಡು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಅವನು ಅದನ್ನು ಪಾಲಿಸುವವರೆಗೆ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ
ಎರಡು ನೂರು ರೂ.ಗಳ ಜುಲ್ಮಾನೆಗೆ ಸಹ ಬದ್ಧನಾಗಿರತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಎರಡು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ಅವನು ಅದನ್ನು ಪಾಲಿಸುವವರೆಗೆ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಇಪ್ಪತ್ತು ಸಾವಿರ ರೂ.ಗಳ ಜುಲ್ಮಾನೆಗೂ ಸಹ ಹೊಣೆಗಾರನಾಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಉಪಖಂಡ (ಬಿ)ರಲ್ಲಿ, "ದೋಷ ಸಿದ್ಧಿಯ ನಂತರ ಒಂದು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ವಿವರಣಪತ್ರವನ್ನು ಸಲ್ಲಿಸುವವರೆಗೂ ಪ್ರತಿ ದಿನಕ್ಕೆ ಎರಡು ನೂರು ರೂ.ಗಳ

ಜುಲ್ಮಾನೆಗೆ ಸಹ ಬದ್ಧನಾಗಿರತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಒಂದು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ವಿವರಣಪತ್ರವನ್ನು ಸಲ್ಲಿಸುವವರೆಗೂ ಪ್ರತಿ ದಿನಕ್ಕೆ ಎರಡು ಸಾವಿರ ರೂ.ಗಳ ದಂಡಕ್ಕೂ ಸಹ ಹೊಣೆಗಾರನಾಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಸಿ) ಉಪಖಂಡ (ಸಿ)ರಲ್ಲಿ, "ದೋಷಸಿದ್ಧಿಯ ನಂತರ ಎರಡು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ವಿವರಪಟ್ಟಿಕೆಯನ್ನು ಸಲ್ಲಿಸುವವರೆಗೂ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಎರಡು ನೂರು ರೂ.ಗಳ ಜುಲ್ಮಾನೆಗೆ ಸಹ ಬದ್ಧನಾಗಿರತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಎರಡು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ವಿವರಪಟ್ಟಿಕೆಯನ್ನು ಸಲ್ಲಿಸುವವರೆಗೂ ಅಪರಾಧವು ಮುಂದುವರೆಯುವ ಪ್ರತಿಯೊಂದು ದಿನಕ್ಕೆ ಎರಡು ಸಾವಿರ ರೂ.ಗಳ ದಂಡಕ್ಕೂ ಸಹ ಹೊಣೆಗಾರನಾಗಿರತಕ್ಕದ್ದು", ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಡಿ) ಖಂಡ (iv)ರಲ್ಲಿ "ಅವನು ಐದು ಸಾವಿರ ರೂ. ಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ " ಎಂಬ ಪದಗಳ ಬದಲಾಗಿ "ಅವನು ಐವತ್ತು ಸಾವಿರ ರೂ. ಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಇ) ಖಂಡ (v)ರಲ್ಲಿ, "ದೋಷ ಸಿದ್ಧಿಯ ನಂತರ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅದನ್ನು ಮರು ಬಾಡಿಗೆಗೆ ಕೊಟ್ಟ ಸಂದರ್ಭದಲ್ಲಿ ಮೂರು ತಿಂಗಳ ಅವಧಿಗೆ ಸ್ವೀಕರಿಸಬಹುದಾದ ಬಾಡಿಗೆಯ ಎರಡರಷ್ಟು ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಅಂಥ ಮೊತ್ತದ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಇವರೆಡರಿಂದಲೂ ದಂಡನೀಯನಾಗತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ ಅಥವಾ ಅದನ್ನು ಮರು ಬಾಡಿಗೆಗೆ ಕೊಟ್ಟ ಸಂದರ್ಭದಲ್ಲಿ ಮೂರು ತಿಂಗಳ ಅವಧಿಗೆ ಸ್ವೀಕರಿಸಬಹುದಾದ ಬಾಡಿಗೆಯ ಎರಡರಷ್ಟು ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಅಂಥ ಮೊತ್ತಕ್ಕೆ ಹೊಣೆಗಾರನಾಗಿರತಕ್ಕದ್ದು", ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಎಫ್) ಖಂಡ (vi)ರಲ್ಲಿ, "ದೋಷ ಸಿದ್ಧಿಯ ನಂತರ ಅವನು ಮೂರು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಮೂವತ್ತು ಸಾವಿರ ರೂ.ಗಳವರೆಗಿನ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಜಿ) ಖಂಡ (vii)ರಲ್ಲಿ, "ದೋಷ ಸಿದ್ಧಿಯ ನಂತರ ಅವನು ಐದು ಸಾವಿರ ರೂ. ಗಳವರೆಗೆ ವಿಸ್ತರಿಸಬಹುದಾದಂಥ ಮೊತ್ತದ ಅಥವಾ ಮರು ಬಾಡಿಗೆಗೆ ಕೊಟ್ಟ ನಂತರ ಮಾಲೀಕನು ಸ್ವೀಕರಿಸುವ ಬಾಡಿಗೆಯ ಎರಡರಷ್ಟು ಮೊತ್ತ, ಇವೆರಡರಲ್ಲಿ ಯಾವುದು ಹೆಚ್ಚೋ ಅಂಥ ಮೊತ್ತದ ಜುಲ್ಮಾನೆಯಿಂದ ಅಥವಾ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಐವತ್ತು ಸಾವಿರ ರೂ. ಗಳವರೆಗೆ ವಿಸ್ತರಿಸಬಹುದಾದಂಥ ಮೊತ್ತದ ಅಥವಾ ಮರು ಬಾಡಿಗೆಗೆ ಕೊಟ್ಟ ನಂತರ ಮಾಲೀಕನು ಸ್ವೀಕರಿಸುವ ಬಾಡಿಗೆಯ ಎರಡರಷ್ಟು ಮೊತ್ತ, ಇವೆರಡರಲ್ಲಿ ಯಾವುದು ಹೆಚ್ಚೋ ಅಂಥ ಮೊತ್ತದ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಎಚ್) ಖಂಡ (ix)ರಲ್ಲಿ, " ಅಥವಾ ಒಂದು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಅತ್ಯಾವಶ್ಯಕ ಸರಬರಾಜು ಅಥವಾ ಸೇವೆಯನ್ನು ನಿಲ್ಲಿಸಿಬಿಟ್ಟ ಅಥವಾ ತಡೆಹಿಡಿದ ದಿನಾಂಕದಿಂದ ಪ್ರಾರಂಭವಾಗಿ ಅತ್ಯಾವಶ್ಯಕ ಸರಬರಾಜು ಅಥವಾ ಸೇವೆಯನ್ನು ಪುನಃ ನೀಡುವವರೆಗಿನ ಅವಧಿಯವರೆಗೂ ಅಪರಾಧವು ಮುಂದುವರೆಯುವ ಪ್ರತಿದಿನಕ್ಕೆ ಒಂದು ನೂರು ರೂ.ಗಳ ಜುಲ್ಮಾನೆಗೆ ಸಹ ಬದ್ಧನಾಗಿರತಕ್ಕದ್ದು" ಎಂಬ ಪದಗಳಿಗೆ ಬದಲಾಗಿ "ಮತ್ತು ಅತ್ಯಾವಶ್ಯಕ ಸರಬರಾಜು ಅಥವಾ ಸೇವೆಯನ್ನು ನಿಲ್ಲಿಸಿಬಿಟ್ಟ ಅಥವಾ ತಡೆಹಿಡಿದ ದಿನಾಂಕದಿಂದ ಪ್ರಾರಂಭವಾಗಿ ಅತ್ಯಾವಶ್ಯಕ ಸರಬರಾಜು ಅಥವಾ ಸೇವೆಯನ್ನು ಪುನಃ ನೀಡುವವರೆಗಿನ ಅವಧಿಯವರೆಗೂ ಅಪರಾಧವು ಮುಂದುವರೆಯುವ ಪ್ರತಿದಿನಕ್ಕೆ ಒಂದು ಸಾವಿರ ರೂ.ಗಳ ದಂಡಕ್ಕೂ ಸಹ ಹೊಣೆಗಾರನಾಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಐ) ಖಂಡ (x)ರಲ್ಲಿ, "ಒಂದು ಸಾವಿರ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಒಂದು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಇವೆರಡರಿಂದಲೂ" ಎಂಬ ಪದಗಳಿಗೆ ಬದಲಾಗಿ "ಹತ್ತು ಸಾವಿರ ರೂ.ಗಳವರೆಗಿನ ದಂಡದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) ಹಾಗೆ ಮರುಸಂಖ್ಯೆ ನೀಡಿದ ಮತ್ತು ತಿದ್ದುಪಡಿ ಮಾಡಲಾದ (1)ನೇ ಉಪಪ್ರಕರಣದ ತರುವಾಯ, ಮುಂದಿನ ಹೊಸ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"(2) ಉಪಪ್ರಕರಣ (1)ರಡಿ ಉಪಬಂಧಿಸಲಾದ ದಂಡಗಳನ್ನು ಕರ್ನಾಟಕ ಬಾಡಿಗೆ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭದ ದಿನಾಂಕದಿಂದ ಪ್ರತಿ ಮೂರು ವರ್ಷಗಳ ಅವಧಿ ಮುಗಿದ ತರುವಾಯ, ನಿಯಮಿಸಬಹುದಾದಂಥ ವಿಧಾನದಲ್ಲಿ ದಂಡದ ಕನಿಷ್ಠ ಮೊತ್ತದ ಶೇಕಡ ಹತ್ತರಷ್ಟಕ್ಕೆ ಹೆಚ್ಚಿಸತಕ್ಕದ್ದು."

**5. ಪ್ರಕರಣ 55ರ ತಿದ್ದುಪಡಿ.-** ಮೂಲ ಅಧಿನಿಯಮದ 55ನೇ ಪ್ರಕರಣದಲ್ಲಿ,-

(i) ಶೀರ್ಷಿಕೆಯಲ್ಲಿನ "ಅಪರಾಧಗಳು" ಎಂಬ ಪದಕ್ಕೆ ಬದಲಾಗಿ "ಉಲ್ಲಂಘನೆಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಉಪಪ್ರಕರಣ (1)ರಲ್ಲಿ,

(ಎ) "ಅಪರಾಧವನ್ನು" ಎಂಬ ಪದಕ್ಕೆ ಬದಲಾಗಿ "ಉಲ್ಲಂಘನೆಯನ್ನು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) "ಆ ಅಪರಾಧವು ನಡೆದ" ಎಂಬ ಪದಕ್ಕೆ ಬದಲಾಗಿ "ಅಂಥ ಉಲ್ಲಂಘನೆ ನಡೆದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಸಿ) ಪ್ರಸ್ತುತ ಪರಂತುಕಕ್ಕೆ ಬದಲಾಗಿ, ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು, ಈ ಉಪಪ್ರಕರಣದಲ್ಲಿ ಇರುವುದಾವುದೂ, ಆ ಉಲ್ಲಂಘನೆಯು ತನ್ನ ಅರಿವಿಗೆ ಬಾರದಂತೆ ನಡೆಯಿತೆಂದು ಅಥವಾ ಅಂಥ ಉಲ್ಲಂಘನೆ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಅವನು ರುಜುವಾತು ಪಡಿಸಿದರೆ, ಅಂಥ ಯಾರೇ ವ್ಯಕ್ತಿಯನ್ನು ಯಾವುದೇ ದಂಡಕ್ಕೆ ಹೊಣೆಗಾರನಾಗಿರತಕ್ಕದ್ದಲ್ಲ.

(iii) ವಿವರಣೆಯನ್ನು ಹೊರತುಪಡಿಸಿ (2)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿನ ಉಲ್ಲಂಘನೆಗಳು ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಆ ಉಲ್ಲಂಘನೆಗಳು

ಅವನ ಯಾವುದೇ ನಿರ್ಲಕ್ಷದಿಂದಾಗಿ ಸಂಭವಿಸಿತೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಅಂಥ ಕೃತ್ಯಕ್ಕೆ ಹೊಣೆಗಾರನೆಂದು ಭಾವಿಸತಕ್ಕದ್ದು ಮತ್ತು ದಂಡವನ್ನು ಪಾವತಿಸಲು ಹೊಣೆಗಾರನಾಗಿರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

## PARLIAMENTARY AFFAIRS AND LEGISLATION SECRETARIAT
## NOTIFICATION
## NO.DPAL 44 SHASHANA 2025, BENGALURU, DATED:08.01.2026

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಬಾಡಿಗೆ (ತಿದ್ದುಪಡಿ) ಅಧಿನಿಯಮ, 2025 (2026 ರ ಕರ್ನಾಟಕ ಅಧಿನಿಯಮ ಸಂಖ್ಯೆ:07) ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## KARNATAKA ACT NO. 07 OF 2026

**(First Published in the Karnataka Gazette Extra-ordinary on the 8th day of January, 2026)**

### THE KARNATAKA RENT (AMENDMENT) ACT, 2025

(Received the assent of the Governor on the 7th day of January, 2026)

An Act further to amend the Karnataka Rent Act, 1999.

Whereas it is expedient further to amend the Karnataka Rent Act,1999 (Karnataka Act 34 of 2001) for decriminalising and rationalising offences to enhance trust-based governance for ease of living and doing business and for the purposes hereinafter appearing;

Be it enacted by the Karnataka State Legislature in the seventy sixth year of the Republic of India as follows, namely:-

**1. Short title and commencement.-** (1) This Act may be called the Karnataka Rent(Amendment) Act, 2025.

(2) It shall come into force at once.

**2. Amendment of section 24.-** In the Karnataka Rent Act,1999 (Karnataka Act 34 of 2001)(hereinafter referred to as the Principal Act),in section 24, after sub-section (1), the following sub-section shall be inserted, namely:-

"(1-A) The controller shall have powers as adjudicating officer for the purpose of determining penalties under section 54, as provided."

**3. Omission of section 53.-**Section 53 of the Principal Act shall be omitted.

**4. Amendment of section 54.-**In the Principal Act, in section 54,-

(i) the existing provision shall numbered as sub -section (1);

(ii) after sub-section (1), as so numbered,-

(a) in clause (i), for the words, "shall on conviction be punishable with fine upto two thousand rupees or with simple imprisonment for a term upto one month or with both and shall also be liable to fine of rupees five hundred," the words "shall be liable to penalty upto two thousand rupees and shall also be liable to additional penalty of rupees five thousand", shall be substituted;

(b) in clause (ii), for the words "he shall on conviction be punishable with fine which may extend to a sum which exceeds the unlawful charges claimed or received by two thousand five hundred rupees or with simple imprisonment for a term upto one month or with both" the words "he shall be liable to penalty which may extend to a sum which exceeds the unlawful charges claimed or received by twenty thousand rupees", shall be substituted;

(c) in clause (iii),-

(a) in sub-clause (a), for the words "on conviction be punishable with fine upto two thousand rupees or with simple imprisonment for a term upto one month or with both, and shall also be liable to fine of rupees two thousand" the words " be liable to penalty upto two thousand rupees and shall also be liable to fine of rupees twenty thousand" shall be substituted;

(b) in sub-clause (b), the words "on conviction be punishable with fine upto one thousand rupees or with simple imprisonment for a term upto one month or both and shall also be liable to fine of rupees two hundred" the words "be liable to penalty upto one thousand rupees and shall also be liable to penalty of rupees two thousand", shall be substituted; and

(c) in sub-clause (c), the words "on conviction be punishable with a fine upto two thousand rupees or with simple imprisonment for a term upto on minimum with both, and shall also be liable to fine of two hundred rupees" the words "be liable to penalty upto two thousand

rupees and shall also be liable to penalty of two thousand rupees", shall be substituted.

(d) in clause (iv), for the words "he shall be punishable with fine which may extend to five thousand rupees", the words " he shall be liable to penalty which may extend to fifty thousand rupees", shall be substituted;

(e) in clause (v), for the words "on conviction be punishable with fine which may extend to five thousand rupees, or double the rent receivable for a period of three months in case it has been relet, whichever is more, or with imprisonment for a term upto one month or with both" the words "be liable to penalty which may extend to fifty thousand rupees, or double the rent receivable for a period of three months in case it has been relet, whichever is more", shall be substituted;

(f) in clause (vi), for the words "he shall on conviction be punishable with fine upto three thousand rupees or with simple imprisonment for a term upto one month or with both", the words "shall be liable to penalty upto thirty thousand rupees", shall be substituted;

(g) in clause (vii), for the words "shall on conviction be punishable fine which may extend to five thousand rupees, or double the rent the landlord receives after re-letting whichever is more, or imprisonment which may extend upto one month or with both", the words "shall be liable to penalty which may extend to fifty thousand rupees, or double the rent the landlord receives after re-letting whichever is more", shall be substituted;

(h) in clause (ix), for the words "or with upto one month's imprisonment, or with both, and shall also be liable to fine of one hundred rupees" the words "and shall also be liable to penalty of one thousand rupees", shall be substituted; and

(i) in clause (x), for the words "fine upto one thousand rupees or with imprisonment for a term upto one month or with both" the words "penalty upto ten thousand rupees" shall be substituted.

(iii) after sub-section (1), as so renumbered and amended the following new sub-section shall be inserted, namely :-

"(2) The penalties provided under sub-section (1) shall be increased by ten percent of the minimum amount of penalty in such manner as may be prescribed after the expiry of every three years from the date of commencement of the Karnataka Rent (Amendment) Act, 2025."

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**5. Amendment of section 55.-** In the Principal Act, in section 55 ,-

(i) in the Heading for the word "Offences", the word "Contraventions", shall be substituted;

(ii) in sub-section (1),

(a) for the words "where an offence", the words "where a contravention", shall be substituted; and

(b) for the words "the commission of the offence", the words "such contravention", shall be substituted.

(c) for the existing proviso, the following shall be substituted, namely :-

"Provided that, nothing contained in this sub-section shall render any such person liable to any penalty if he proves that the contravention was without his knowledge or that he exercised all due diligence to prevent such contraventions."

(iii) for sub-section (2), except the Explanation the following shall be substituted, namely:-

"(2) Notwithstanding anything contained in sub-section (1), where contraventions under this Act has been done with the consent or connivance of, or that contraventions is attributable to any neglect on the part of any director, manager, secretary or other officer such Director, manager, Secretary or other officer shall also be deemed to be liable for such action and shall be liable to pay penalty."

The above translation of ಕರ್ನಾಟಕ ಬಾಡಿಗೆ (ತಿದ್ದುಪಡಿ) ಅಧಿನಿಯಮ, 2025 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ:07) be published in the official Gazette under clause (3) of Article 348 of the constitution of India.

**THAAWARCHAND GEHLOT**
**GOVERNOR OF KARANATAKA**

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH